ಆಗುತ್ತಿದ್ದು ಪೋಲಿಸ್ ಸ್ಟೇಷನ್ ಇಲ್ಲದೇ ತೊಂದರೆಯಾಗಿದ್ದು, ಆದರೆ ಅಲ್ಲಿ ಅದು ಅಗತ್ಯವಿಲ್ಲವೆಂದು ಸಚಿವರು ಹೇಳಿದ್ದಾರೆ. ತಿಪಟೂರಿನಲ್ಲಿ ನಾಲ್ಕು ಪೋಲಿಸ್ ಸ್ಟೇಷನ್ ಇದೆ, ನಾಲ್ಕು ಹೋಬಳಿಗಳಿದ್ದು ಅದರಲ್ಲಿ ಕಿಬ್ಬಳ್ಳಿ ಹೋಬಳಿ ಒಂದು ಇದೆ. ನೀವು ಏನು ರೂರಲ್ ಪೋಲೀಸ್ ಸ್ಟೇಷನ್ ಎಂದು ತಿಪಟೂರಿನಲ್ಲಿ ಇಟ್ಟಿದ್ದೀರಿ ಅದನ್ನು ಕಿಬ್ಬಳ್ಳಿಗೆ ಶಿಫ್ಟ್ ಮಾಡಿದರೆ ಅಲ್ಲಿರುವ ಜನಕ್ಕೆಲ್ಲಾ ಅನುಕೂಲವಾಗಿ ಅನಾವಶ್ಯಕವಾಗಿ ತಿಪಟೂರಿಗೆ ಹೋಗುವುದು ತಪ್ಪುತ್ತದೆ. ಕನಿಷ್ಟ ತಿಪಟೂರಿನಲ್ಲಿರುವ ಗ್ರಾಮಾಂತರ ಪೋಲಿಸ್ ಸ್ಟೇಷನ್‌ನ್ನು ಕಿಬ್ಬಳ್ಳಿ ಕ್ರಾಸ್‌ಗೆ ಶಿಫ್ಟ್ ಮಾಡಿಕೊಡುತ್ತೀರ ಎಂದು ನಾನು ಸಚಿವರಲ್ಲಿ ಕೇಳುತ್ತಿದ್ದೇನೆ.

ಶ್ರೀ ರೋಷನ್ ಬೇಗ್ : ಮಾನ್ಯ ಉಪಾಧ್ಯಕ್ಷರೇ, ಅವರು ಪ್ರಶ್ನೆ ಕೇಳಿರುವುದರಲ್ಲಿ ಕಿಬ್ಬನಹಳ್ಳಿಗೆ ಹೊಸ ಪೋಲಿಸ್ ಸ್ಟೇಷನ್ ಮಾಡಿಕೊಡುತ್ತೀರಾ ಎಂದಿದ್ದಾರೆ. ಅದಕ್ಕೆ ಸಂಬಂಧಪಟ್ಟ ಹಾಗೆ ನಾವು ಉತ್ತರ ಕೊಟ್ಟಿದ್ದೇವೆ. ಆದರೆ ಈಗ ಅವರು ಕೇಳುತ್ತಿದ್ದಾರೆ, ತಿಪಟೂರು ಗ್ರಾಮಾಂತರ ಪೋಲಿಸ್ ಸ್ಟೇಷನ್ ಏನಿದೆ ಅದನ್ನು ಕಿಬ್ಬಳ್ಳಿ ಕ್ರಾಸ್‌ಗೆ ಏಕೆ ಶಿಫ್ಟ್ ಮಾಡಬಾರದು ಎಂದಿದ್ದಾರೆ. ಏಕೆಂದರೆ ಅಲ್ಲಿ ಜನಸಂಖ್ಯೆ ಹೆಚ್ಚಾಗಿಲ್ಲ ಮತ್ತು ಕೆಲಸಕೂಡ ಜಾಸ್ತಿಯಿಲ್ಲವೆಂದು ಹೇಳಿ ಕಿಬ್ಬನ ಹಳ್ಳಿಯಲ್ಲಿ ಜನಸಂಖ್ಯೆ ಮತ್ತು ಕೆಲಸ ಎರಡೂ ಹೆಚ್ಚಾಗಿದೆಯೆಂದಿದ್ದಾರೆ. ಅದು ಒಂದು ಒಳ್ಳೆಯ ಸಲಹೆಯಾಗಿದ್ದು ಅದನ್ನು ಮಾಡುತ್ತೇವೆ ಎನ್ನುವ ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಅಲ್ಲಿ ಕೆಲಸ ಇಲ್ಲ ಎಂದು ನಾನು ಹೇಳಲಿಲ್ಲ. ಅಲ್ಲಿ ನಾಲ್ಕು ಪೋಲಿಸ್ ಸ್ಟೇಷನ್‌ಗಳು ಇದ್ದು ಕಿಬ್ಬಳ್ಳಿ ಹೋಬಳಿ ಹೋಬಳಿ ಸ್ಟೇಷನ್ ತಿಪಟೂರು ನಗರದಲ್ಲಿದೆ. ಮೊದಲು ಇದ್ದ ಸುಮಾರು ಹಳ್ಳಿಗಳು ಈಗ ಪುರಸಭೆಗೆ ಸೇರಿರುವುದರಿಂದ ಕಿಬ್ಬಳ್ಳಿ ಹೋಬಳಿಯಿಂದ ಸುಮಾರು 30 ಕಿ.ಮೀ. ದೂರದಿಂದ ತಿಪಟೂರಿಗೆ ಈಗ ಬರಬೇಕಾಗಿದೆ. ಅಲ್ಲಿಯ ಜನರು ನನ್ನನ್ನು ಬಹಳ ಬಾರಿ ಕೇಳಿಕೊಂಡಿದ್ದಾರೆ. ತಿಪಟೂರಿನಲ್ಲಿರುವ ಕಿಬ್ಬಳ್ಳಿ ಹೋಬಳಿ ಪೋಲಿಸ್ ಸ್ಟೇಷನ್‌ನ್ನು ಕಿಬ್ಬಳ್ಳಿ ಕ್ರಾಸ್‌ಗೆ ಶಿಫ್ಟ್ ಮಾಡಿಸಿಕೊಡಿ, ಅಲ್ಲಿ ಕಾರ್ಯ ನಿರ್ವಹಿಸಲು ಅನುಕೂಲವಾಗುತ್ತದೆ ಎಂದು ಅಲ್ಲಿಯ ಜನರು ಬಂದು ನನ್ನನ್ನು ಕೇಳಿಕೊಂಡಿದ್ದಾರೆ. ಈಗ ಸುಮಾರು ಹಳ್ಳಿಗಳು ಟೌನ್‌ಗೆ ಸೇರಿರುವುದರಿಂದ ಈಗ ಅಲ್ಲಿರತಕ್ಕಂಥ ಪೋಲಿಸ್ ಸ್ಟೇಶನ್ ಅಲ್ಲಿಗೆ ಅಗತ್ಯವಿಲ್ಲ. ಆದುದರಿಂದ ಅದನ್ನು ಕಿಬ್ಬಳ್ಳಿ ಹೋಬಳಿಗೆ ಶಿಫ್ಟ್ ಮಾಡಿಸಿಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ ಮಾನ್ಯ ಗೃಹ ಸಚಿವರು ಈಗಾಗಲೇ ಅದನ್ನು ಮಾಡಿಕೊಡುತ್ತೇವೆಂದು ಹೇಳಿದ್ದಾರೆ ಆದುದರಿಂದ ಮತ್ತೆ ಪ್ರಸ್ತಾಪಿಸುವ ಅಗತ್ಯವಿಲ್ಲ.

ಶಿರಾ ಮತ್ತು ಕಳ್ಳಂಬೆಳ ಸುತ್ತಲಿನ ಪ್ರದೇಶಗಳಲ್ಲಿ ಎಸ್ಕೇಪ್ ಚಾನಲ್

400 - ಶ್ರೀ ಟಿ.ಬಿ ಜಯಚಂದ್ರ (ಕಳ್ಳಂಬೆಳ) : ಮಾನ್ಯ ಭಾರೀ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ಮತ್ತು ಕಳ್ಳಂಬೆಳ ಸುತ್ತಲಿನ ಪ್ರದೇಶಗಳು ಬರಪೀಡಿತ ಪ್ರದೇಶಗಳಾಗಿದ್ದು ಕುಡಿಯುವ ನೀರಿಗಾಗಿ ಪರದಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಅ) *ಗುಬ್ಬಿ ತಾಲ್ಲೂಕಿನ ಪಟ್ಟಾನಾಯಕನ ಹಳ್ಳಿ ಬಳಿ ಬಂದು ಎಸ್ಕೇಪ್ ಚಾನಲ್ ಮಾಡುವುದರಿಂದ ಪ್ರವಾಹ ಬಂದಂತಹ ಸಂದರ್ಭಗಳಲ್ಲಿ ಶಿರಾ ತಾಲ್ಲೂಕಿಗೆ ಹೇಮಾವತಿ ನೀರನ್ನು ಹರಿಸಬಹುದೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಕುಡಿಯುವ ನೀರಿನ ಸಲುವಾಗಿ ಎಸ್ಕೇಪ್ ಚಾನಲ್ ಮಾಡಿ ಕಳ್ಳಂಬೆಳ್ಳ ತಾಲ್ಲೂಕಿನ ಹಳ್ಳಿಗಳಿಗೆ ನೀರನ್ನು ಒದಗಿಸಲು ಸರ್ಕಾರ ಯೋಚಿಸಿದೆಯೇ?*

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :

ಅ) ಹೌದು

ಆ) ಅನುಮೋದಿತ ಹೇಮಾವತಿ ಯೋಜನೆಯಲ್ಲಿ ಶಿರಾ ತಾಲ್ಲೂಕಿಗೆ ನೀರನ್ನು ಒದಗಿಸುವ ಪ್ರಸ್ತಾವನೆ ಇರುವುದಿಲ್ಲ.

ಇ) ಅನುಮೋದಿತ ಹೇಮಾವತಿ ಯೋಜನೆಯಲ್ಲಿ ಕಳ್ಳಂಬೆಳ್ಳ ಹೋಬಳಿ ಹಳ್ಳಿಗಳಿಗೆ ನೀರನ್ನು ಒದಗಿಸುವ ಪ್ರಸ್ತಾವನೆ ಇರುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೇ, ನನ್ನ ಪ್ರಶ್ನೆಯೇನೆಂದರೆ ಶಿರಾ ಮತ್ತು ಕಳ್ಳಂಬೆಳ್ಳ ಪ್ರದೇಶ ಬರಗಾಲ ಪೀಡಿತ ಪ್ರದೇಶವಾಗಿದ್ದು ಅಲ್ಲಿ ಕುಡಿಯುವ ನೀರಿಗೋಸ್ಕರ ಬಹಳ ತೊಂದರೆಯಾಗಿರುವುದರಿಂದ ಹೇಮಾವತಿ ನೀರನ್ನು ಕೊಡಿ ಎಂದು ಕೇಳಿದ್ದೇನೆ. ತಾವು ಉತ್ತರದಲ್ಲಿ ಏನು ಹೇಳಿದ್ದೀರೆಂದರೆ ಅನುಮೋದಿತ ಹೇಮಾವತಿ ಯೋಜನೆಯಲ್ಲಿ ಕಳ್ಳಂಬೆಳ್ಳ ಹೋಬಳಿ ಹಳ್ಳಿಗಳಿಗೆ ನೀರನ್ನು ಒದಗಿಸುವ ಪ್ರಸ್ತಾವನೆ ಇರುವುದಿಲ್ಲ ಎನ್ನಲಾಗಿದೆ. ಅದನ್ನು ನಾನು ಒಪ್ಪುತ್ತೇನೆ. ಆ ಯೋಜನೆಯಲ್ಲಿ ಅದು ಸೇರಿಲ್ಲ. ಕೇವಲ ಗುಬ್ಬಿ ತಾಲ್ಲೂಕಿನಿಂದ 600 ಮೀಟರ್ ಅಂತರದಲ್ಲಿ ಹೇಮಾವತಿ ನಾಲೆ ಇದ್ದು ನೀರು ಹರಿಯುತ್ತಿದ್ದು ಈಗಾಗಲೇ ತಮಗೆ ತಿಳಿದಿರುವಂತೆ ಹೇಮಾವತಿ ನಾಲೆಯಲ್ಲಿ ನೀರು ತುಂಬಿ ಹರಿಯುತ್ತಿದ್ದು ಅದನ್ನು ಯಾರೂ ಸರಿಯಾಗಿ ಉಪಯೋಗಿಸಿಕೊಳ್ಳದೇ ಸಮುದ್ರಕ್ಕೆ ಹೋಗಿ ಸೇರುವಂಥ ಸಂದರ್ಭದಲ್ಲಿ, ಪ್ರವಾಹ ಬರತಕ್ಕಂಥ ಸಂದರ್ಭದಲ್ಲಿ ಒಂದು ಎಸ್ಕೇಪ್ ಚಾನಲ್ ಮುಖೇನ ಕಳ್ಳಂಬೆಳ್ಳ ಕೆರೆಗೆ ನೀರನ್ನು ಕೊಟ್ಟರೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಿದ ಹಾಗೆ ಆಗುತ್ತದೆ ಮತ್ತು ಅದೇ ರೀತಿಯಿಂದ ಶಿರಾ ತಾಲ್ಲೂಕಿಗೆ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಪ್ರಶ್ನೆ ಕೇಳಿದ್ದೇನೆ. ದಯಮಾಡಿ ನನ್ನ ಪ್ರಶ್ನೆಯ ಮೂಲಾರ್ಥವನ್ನು ಅರ್ಥಮಾಡಿಕೊಳ್ಳಿ. ಇದು ಕಡಿಯುವ ನೀರಿನ ಬವಣೆ ಬಗ್ಗೆ ಖಾಸಗಿಯಾಗಿ ಮತ್ತು ಸರ್ಕಾರದ ದಾಖಲೆಗಳಿಂದ ತಮಗೆ ಗೊತ್ತಿರತಕ್ಕಂಥದ್ದು. ಅನುಭವವಾಗಿರತಕ್ಕಂಥದ್ದು, ಅದರ ಕಷ್ಟ ಬಿಡಿಸಲಾಗದ್ದು. ಅದಕ್ಕೇ ಒಂದೇ ಪರಿಹಾರ ಎಂದರೆ ನೀವು ಮೂರು ವರ್ಷಗಳಿಗೆ, ಹತ್ತು ವರ್ಷಗಳಿಗೆ ಒಂದು ಬಾರಿ ಕೊಟ್ಟರೂ ಕೂಡ ಕೊಡುವಂಥ ಸಂದರ್ಭದಲ್ಲಿ ನೀವು ಹೇಮಾವತಿ ನೀರನ್ನು ಕೊಡಬೇಕು. ಎರಡನೆಯದಾಗಿ ಹೇಮಾವತಿ ನೀರನ್ನು ಕೊಡಬೇಕಾದರೆ ನಮ್ಮ ನ್ಯಾಷನಲ್ ವಾಟರ್ ಪಾಲಿಸಿ ಪ್ರಕಾರ ಯಾವುದೇ ತರವಾದ ನಿಬಂಧನೆಗಳು ಇಲ್ಲ. ಈಗ ನಾವು ಮದ್ರಾಸ್ ನಗರಕ್ಕೆ ತೆಲುಗುಗಂಗಾ ಮುಖಾಂತರ ನೀರನ್ನು ಕೊಡುವಂಥ ಸಂದರ್ಭದಲ್ಲಿ ಶಿರಾ ಪಟ್ಟಣಕ್ಕೆ ಅಥವಾ ಕಳ್ಳಂಬೆಳ್ಳಕ್ಕೆ ಏಕೆ

ರನ್ನು ಕೊಡಬಾರದು? ಇದು ನನ್ನ ಮೂಲವಾದ ಪ್ರಶ್ನೆ. ಇದಕ್ಕೆ ಕನಿಷ್ಟ 20 ಲಕ್ಷ ರೂ. ಗಳಿಗಿಂತ ಚ್ಚು ಖರ್ಚಾಗುವುದಿಲ್ಲ. ಇದರ ಬಗ್ಗೆ ಸ್ಪಷ್ಟವಾದ ಆಶ್ವಾಸನೆಯನ್ನು ಮಂತ್ರಿಗಳು ಕೊಡಬೇಕೆಂದು ಸಂದರ್ಭದಲ್ಲಿ ಕೇಳುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಾ ಮತ್ತು ಕಳ್ಳಂಬೆಳ್ಳಕ್ಕೆ ಕುಡಿಯುವ ನೀರಿಗೆ ತೊಂದರೆ ಇದೆ ಎನ್ನುವ ಮಾತಿನಲ್ಲಿ ಎರಡು ಮಾತಿಲ್ಲ, ದನ್ನು ಸರ್ಕಾರ ಒಪ್ಪಿಕೊಂಡಿದೆ. ನಮ್ಮ ಹೇಮಾವತಿ ಜಲಾಶಯನ ಒರಿಜಿನಲ್ ಪ್ರಾಜೆಕ್ಟ್‌ನಲ್ಲಿ ೫. ಟಿ.ಎಂ.ಸಿ. ನೀರನ್ನು ಶೇಖರಣೆ ಮಾಡುವುದರಲ್ಲಿ ಕೆ.ಆರ್. ಪೇಟೆ, ತಿಪಟೂರು ಮತ್ತು ಂಗಮಂಗಲ ಟೌನ್‌ಗಳಿಗೆ 2 ಟಿ.ಎಂ.ಸಿ. ನೀರನ್ನು ಕೊಡಬೇಕೆಂದು ಒರಿಜಿನಲ್ ಪ್ರಾಜೆಕ್ಟ್‌ನಲ್ಲಿ ಳವಡಿಸಿಬಿಟ್ಟಿದ್ದೇವೆ. ಇದಾದಮೇಲೆ ತದನಂತರ ಶಿರಾ, ಕಳ್ಳಂಬೆಳ್ಳ ಮತ್ತು ಚಿಕ್ಕನಾಯಕನಹಳ್ಳಿ, ಈ ಮೂರೂ ಬಂದಿದೆ. ಅದರಲ್ಲಿ ನೀವು ಈಗ ಹೇಳುತ್ತಿರತಕ್ಕಂಥಾದ್ದು ಒಂದು ಎಸ್ಕೇಪ್ ಚಾನಲ್ ಾಡಿ ಪ್ರವಾಹ ಬಂದಂತಹ ಕಾಲದಲ್ಲಿ ನೀರು ಹೋಗದೆ ಇರುವ ರೀತಿಯಲ್ಲಿ ಮಾಡಿಕೊಡಿ ಂದು ಹೇಳಿದ್ದೀರಿ. ನ್ಯಾಷನಲ್ ವಾಟರ್ ಪಾಲಿಸಿಯೊಳಗೆ ಸ್ಪಷ್ಟವಾಗಿದೆ. ಕುಡಿಯುವ ನೀರಿಗೆ ್ರಥಮ ಆಧ್ಯತೆ ಇದೆ. ಎಂದು ಕೃಷ್ಣಾ ಬೇಸಿಸ್‌ನಿಂದ ಮದ್ರಾಸ್‌ಗೆ ತೆಗೆದುಕೊಂಡು ಹೋಗಿದ್ದಾರೆ. ಾವೇರಿ ಬೇಸಿರ್ ಕೃಷ್ಣಾ ಬೇಸಿರ್ ಇದ್ದರೂ ಸಹ ಅದು ನೀರಾವರಿ ಅಚ್ಚುಕಟ್ಟು ಪ್ರದೇಶಗಳಿಗೆ ಆಗಲಿ ಾದರಲ್ಲಿ ಬರುತ್ತದೆಯೇ ವಿನಃ ಕುಡಿಯುವ ನೀರಿಗೆ ನ್ಯಾಷನಲ್ ವಾಟರ್ ಪಾಲಿಸಿಯಲ್ಲಿ ಬರುವುದಿಲ್ಲ. ಂದು ಎಸ್ಕೇಪ್ ಚಾನಲ್ ಮತ್ತು ಚಿಕ್ಕನಾಯಕನ ಹಳ್ಳಿಯದು ನಾನೇ ಪ್ರಪೋಸಲ್ ಮಾಡಿದ್ದೇನೆ. ಮಾನ್ಯ ನಗರಾಭಿವೃದ್ಧಿ ಸಚಿವರು ಪ್ರಸ್ತಾವನೆಯಲ್ಲಿ ಇಲ್ಲಿತನಕ ಕಳುಹಿಸಿಲ್ಲ ಅವರು ಇಲ್ಲಿ ಇದ್ದಾರೆ, ಾವರಲ್ಲಿ ಪ್ರಾರ್ಥನೆ ಮಾಡುತ್ತೇನೆ, ಅವರು ಪ್ರಸ್ತಾವನೆಯನ್ನು ಕಳುಹಿಸಿಕೊಡಲಿ. ಎಲ್ಲಾ ನಿಯಮಗಳನ್ನು ಡಿಲಿಸಿ ನ್ಯಾಷನಲ್‌ವಾಟರ್ ಪಾಲಿಸಿ ಒಳಗಡೆ, ನಿಮಗೆ ಮತ್ತು ಅವರಿಗೆ ನೀರು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಉಪಾಧ್ಯಕ್ಷರೇ, ಪ್ರಸ್ತಾವ ಕಳುಹಿಸಿಕೊಡಬೇಕಾದರೆ ಪಟ್ಟಣ ಪ್ರದೇಶಗಳಿಗೆ ಆದರೆ ನಗರಾಭಿವೃದ್ಧಿ ಸಚಿವರಾದ ಮಾನ್ಯ ಬಚ್ಚೇಗೌಡರಿಗೆ ಬರುತ್ತದೆ. ಆದರೆ ಹಳ್ಳಿಗಾಡಿನ ಪ್ರದೇಶಗಳಿಗೆ ಕಳುಹಿಸಿಕೊಡಬೇಕಾದಂತಹವರು ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಕೊಡಬೇಕು. ದಯಮಾಡಿ ನಾನು ಹೇಳತಕ್ಕಂಥಾದ್ದು ತಾವು ನೀರು ಕೊಡುವುದಕ್ಕೆ ಒಪ್ಪುವುದಾದರೆ ಅವರು ಬೇಡ ಎಂದು ಹೇಳುತ್ತಾರೆಯೇ ನೀವು ನಿಮ್ಮ ಪಾಲಿಸಿಯನ್ನು ಬಿಟ್ಟು ನ್ಯಾಷನಲ್ ವಾಟರ್ ಪಾಲಿಸಿ ಪ್ರಕಾರ ಯಾವ ನಿಭಂದನೆ ಇಲ್ಲ ಎಂದಾಗ ನಾವು ಕೊಡುತ್ತೇವೆ ಎಂದು ಹೇಳಿದರೆ ಅವರು ತೆಗೆದುಕೊಳ್ಳುವುದಕ್ಕೆ ತಯಾರಿದ್ದಾರೆ. ನೀವು ಕೊಡುತ್ತೇವೆಂದು ಆಶ್ವಾಸನೆ ಕೊಡಿ.

ಶ್ರೀ ಕೆ.ಎನ್. ನಾಗೇಗೌಡ : ಒಂದು ಮಾತು ನೀರು ಕೊಡುವುದರಲ್ಲಿ ನನಗೆ ಅಭ್ಯಂತರ ಇಲ್ಲ. ಒಂದು ಸ್ಪಷ್ಟವಾದಂತಹ ವಿಷಯ ಹೇಳತಕ್ಕಂಥಾದ್ದು ಏನೆಂದರೆ ಕುಡಿಯುವ ನೀರು ಕೊಡುವುದರಲ್ಲಿ ಅಭ್ಯಂತರ ಇಲ್ಲ. ಪ್ರಪೋಸಲ್ ಬಂದರೆ I will give the clearance ಅರ್ಬನ್ ಡೆವಲಪ್‌ಮೆಂಟ್

ಡಿಪಾರ್ಟ್‌ಮೆಂಟ್‌ನವರು ಅದಕ್ಕೆ ಎಕ್ಸ್‌ಪೆಂಡಿಚರ್ ಮಾಡಿಕೊಂಡು ನೀರನ್ನು ನಿಮ್ಮ ಕಳ್ಳಂಬ
ಕೆರೆಗೆ ಶಿರಾ ಕೆರೆಗೆ, ಚಿಕ್ಕನಾಯಕನ ಹಳ್ಳಿಗೆ ತೆಗೆದುಕೊಂಡು ಹೋಗಲಿ. ನನ್ನ ಅಭ್ಯಂತರ ಏನೂ ಇ

ಶ್ರೀ ಟಿ.ಬಿ. ಜಯಚಂದ್ರ : ಶಿರಾ ತಾಲ್ಲೂಕಿನಲ್ಲಿ, ಕಳ್ಳಂಬೆಳ್ಳ ಪ್ರದೇಶದಲ್ಲಿ ಇಲ್ಲಿವರೆಗೆ ಸರ್ಕಾರಗ
ನೀರಿಗೊಸ್ಕರ ಖರ್ಚು ಮಾಡಿರುವುದನ್ನು ನೋಡಿದರೆ ಅದಕ್ಕೆ ಹಾಕಿರತಕ್ಕಂಥ ಬಂಡವಾಳ ಹಣವ
ಎಲ್ಲಾದರೂ ಬಡ್ಡಿಗೆ ಕೊಟ್ಟಿದ್ದರೆ ಅದಕ್ಕೆ ಬಿಸ್ಲೇರಿ ನೀರನ್ನು ಎಲ್ಲರ ಮನೆಮನೆಗೂ ಕೊಡಬಹುದಾಗಿ
ಅಷ್ಟು ಹಣವನ್ನು ಖರ್ಚು ಮಾಡಿ ಇವತ್ತು ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಆಗಿ
ದಯಮಾಡಿ ಅವರು ನೀರು ಕೊಡುತ್ತೇವೆನ್ನುವ ಮಾತನ್ನು ಹೇಳಬೇಕಾದರೆ ಈಗಲಾದರೂ ಕೂ
ನನ್ನ ನೆರವಿಗೆ ಬಂದು ಇವತ್ತು ಅದಕ್ಕೆ ತಗಲತಕ್ಕಂಥ ವೆಚ್ಚ ಕೇವಲ 20 ಲಕ್ಷ ರೂಪಾಯಿ ಆಗುತ್ತ
ಅದನ್ನು ಕೊಡಬಹುದು. ಅದು ಕಷ್ಟ ಆಗಲಾರದು. ಕೇವಲ 20-30 ಭೋರಿಗೆ ಆಗತಕ್ಕಂಥ ದುಡ
ಅದನ್ನು ಬೇಕಾದರೆ ಸಂದರ್ಭ ಬಂದರೆ ನಾವು ರೈತರು ಭರಿಸುವುದು ತಯಾರಿದ್ದೇವೆ ಎಂದು ಅಶ್ವಾಸ
ಕೂಡ ಕೊಡುತ್ತೇನೆ. ಆ ಸಂದರ್ಭದಲ್ಲಿ ನೀವು ಈಗಲೇ ಹೇಳಿದರೆ ಇದೇ ಪ್ರಪೋಸಲ್ ಆಗುತ್ತ
ಇದು ಆಶ್ವಾಸನೆ ಆಗುತ್ತದೆ. ಇನ್ನೊಂದು ತಿಂಗಳಲ್ಲಿ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆ

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೇ, ಈಗ ನಮ್ಮಲ್ಲಿ ಉದ್ಯೋಗ ಭರವ
ಯೋಜನೆ ಮತ್ತು ಜೆ.ಆರ್.ವೈ ಯೋಜನೆ ಈ ಎಲ್ಲಾ ಹಣ ಇದೆ. ಇದರ ಜೊತೆಗೆ ನಾವು ಹೆಚ್ಚುವ
ಹಣವನ್ನೂ ಕೂಡ ನಮ್ಮ ಇಲಾಖಾ ವತಿಯಿಂದ, ಅದು ಒಂದು ರೀತಿಯಲ್ಲಿ ಪರ್ಕೂಲೇಷನ
ಟ್ಯಾಂಕ್ ತರಹ ಆಗುತ್ತದೆ, ಎಂದರೆ ನಮ್ಮ ಕೊಳವೆ ಬಾವಿಗಳಿಂದ ನೀರು ಅಂತರ್ಜಲ ಉಕ್ಕುವಂತ
ಸಂದರ್ಭ ಇರುವುದರಿಂದ ಅವರು ದಯಮಾಡಿ ಇಂತಹ ಪ್ರಪೋಸಲ್ ಕಳುಹಿಸಿಕೊಟ್ಟರೆ ನಾಳ
ಖಂಡಿತ ಅದಕ್ಕೆ ಹಣವನ್ನು ಕ್ರಿಯಾ ಯೋಜನೆಯಲ್ಲಿ ಹಣವನ್ನು ತೆಗೆದು ಇಡುವುದಕ್ಕೆ ಪ್ರಯತ್ನವನ
ಮಾಡುತ್ತೇವೆ. ಅದು ಒಳ್ಳೆಯ ಸಲಹೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಟೌನ್‌ಗೆ ಹೋಗಬೇಕಾದರೆ ಏನ
ಪ್ರಮುಖವಾದ ಹಳ್ಳಿಗಳು ಇದೆ, ಟೌನ್ ವಿಚಾರವಾಗಿ ಮಾನ್ಯ ಬಚ್ಚೇಗೌಡರು ಒಪ್ಪಿದ್ದಾರೆ. ಪ್ರಮುಖವಾದ
ಹಳ್ಳಿಗೆ ನೀರು ಕೊಡದೇ ಟೌನ್‌ಗೆ ನೀರು ತೆಗೆದುಕೊಂಡು ಹೋಗುವುದು ಕಷ್ಟವಾಗುತ್ತದೆ. ತಾವು
ಏನಾದರೂ ಮನಸ್ಸು ಮಾಡಿದರೆ ಅಲ್ಲಿ ಬರುವಂತಹ ಮೈನ್ ವಿಲೇಜ್‌ಗಳಿಗೆ ಈಗಾಗಲೇ ವಾಟರ್
ಟ್ಯಾಂಕ್ ಇರುವ ಹಳ್ಳಿಗಳಿಗೆ ಏನಾದರೂ ನೀರನ್ನು ನೀವು ಮಾಡಿಕೊಡುವುದಕ್ಕೆ ಒಪ್ಪಿಕೊಂಡರೆ,
ಚಿಕ್ಕನಾಯಕನ ಹಳ್ಳಿ, ಶಿರಕ್ಕೆ ಹೋಗುವ ದಾರಿಯಲ್ಲಿ ಇರುವ ಎಲ್ಲಾ ಪ್ರಮುಖ ಹಳ್ಳಿಗಳನ್ನು ಕವರ್
ಮಾಡಬಹುದು. ಬರಗಾಲದಲ್ಲಿ ನಮಗೆ ಅನುಕೂಲವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಇಂತಹ ವಿಚಾರಗಳಲ್ಲಿ ಬೇರೆ ಕಡೆಯಿಂದ ನದಿ ನೀರನ್ನು
ಇನ್ನೊಂದು ದೊಡ್ಡ ಪಟ್ಟಣಕ್ಕೆ ತೆಗೆದುಕೊಂಡು ಹೋಗತಕ್ಕಂಥ ವಿಚಾರ ಬಂದರೆ ನಗರಾಭಿವೃದ್ಧಿ
ಇಲಾಖೆಯವರು ನಮಗೆ ಈಗಾಗಲೇ ಒಪ್ಪಿಗೆ ಕೊಟ್ಟಿದ್ದಾರೆ. ಮುಖ್ಯ ವಾಹಿನಿಯಿಂದ ನಮ್ಮ ಹಳ್ಳಿಗಳಿಗೆ
ತೆಗೆದುಕೊಂಡು ಹೋಗತಕ್ಕಂಥ ವ್ಯವಸ್ಥೆಗೆ ಅದರ ಇಡೀ ಖರ್ಚನ್ನು ಅಥವಾ ಅಂದಾಜುವೆಚ್ಚವನ್ನು

ಮತ್ತು ತಗುಲಬಹುದಾದಂತಹ ನಿರ್ವಹಣಾ ವೆಚ್ಚವನ್ನು ನೀವು ಕೊಟ್ಟರೆ ಅದನ್ನು ನಾವು ಮಾಡಿಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಈಗಾಗಲೇ ಹೇಳಿದ್ದಾರೆ. ಆದೇಶ ಕೂಡ. ಆಗಿದೆ. ಅಂಥದ್ದು ಸಲಹೆಗಳೇನಾದರೂ ಇದ್ದರೆ ನಾನು ನಗರಾಭಿವೃದ್ಧಿ ಸಚಿವರ ಜೊತೆ ಮಾತನಾಡಿ ಅದನ್ನು ನಾವು ಒದಗಿಸಿಕೊಡತಕ್ಕಂಥ ಕೆಲಸವನ್ನು ಮಾಡುತ್ತೇವೆ. ಈ ರೀತಿ ಈಗಾಗಲೇ ಬೆಳಗಾವಿ ಜಿಲ್ಲೆಯಲ್ಲಿ ಮಾಡಿದ್ದೇವೆ.

ಉಪಾಧ್ಯಕ್ಷರು : ಅಲ್ಲ, ಅವರು ಈಗಾಗಲೇ ಒಪ್ಪಿಕೊಂಡಿದ್ದಾರೆ. ಮತ್ತು ನೀವು ಪ್ರಶ್ನೆ ಕೇಳುತ್ತೇನೆ ಎಂದು ಹೇಳುತ್ತೀರಿ.

ಶ್ರೀ ಟಿ.ಬಿ. ಜಯಚಂದ್ರ : ಅವರು ಒಪ್ಪಿಕೊಂಡಿದ್ದಾರೆ, ನಾವೂ ಒಪ್ಪಿಕೊಂಡಿದ್ದೇವೆ. ನೀರು ಕೊಡುತ್ತೇವೆ ಇನ್ನೊಂದು ತಿಂಗಳಲ್ಲಿ ಪ್ರಾರಂಭ ಮಾಡುತ್ತೇವೆ ಎಂದು ಹೇಳಬೇಕು. ನಮ್ಮ ಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕು.

ಉಪಾಧ್ಯಕ್ಷರು : ನಿಮ್ಮ ಕಷ್ಟವಾಯಿತು. ಅವರು ನೀರು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ನಿಮ್ಮದು ಮತ್ತೆ ಏನು ಪ್ರಶ್ನೆ?

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಉಪಾಧ್ಯಕ್ಷರೇ, ನಾವು ಈಗ ತುಮಕೂರು ಕನಾಲ್‌ನಲ್ಲಿ ಸರ್ವೀಸ್ ಮಾಡಿದ್ದೇವೆ. 800 ಕ್ಯೂಸೆಕ್ಸ್ ನೀರು ಇವತ್ತು ಬೆಳಿಗ್ಗೆಯಿಂದ ಬಿಡುತ್ತಿದ್ದೇವೆ. ನೀರಿಗೆ ತೊಂದರೆ ಏನೂ ಇಲ್ಲ. ಆ ನೀರನ್ನು ನಾಲೆ ಕೆಳಗಡೆ ಹಾಕತಕ್ಕಂಥ ಎಕ್ಸ್‌ಪೆಂಡಿಚರ್‌ನ್ನು ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಖರ್ಚು ಮಾಡುವುದಕ್ಕೆ ಆಗುವುದಿಲ್ಲ. ಕಾರಣ ನಮ್ಮ ಉದ್ದೇಶ ನೀರು ಕೊಡತಕ್ಕಂಥಾದ್ದು, ಜಮೀನಿಗೆ ವಿನಃ ಕುಡಿಯುವುದಕ್ಕಲ್ಲ. ಮಾನ್ಯ ಪ್ರಕಾಶ್‌ರವರು ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಹೇಳಿದ್ದಾರೆ. ಅವರಿಬ್ಬರಿಂದ ನಮ್ಮ ಪ್ರಪೋಸಲ್ ಕಳುಹಿಸಿ, ಕ್ಲಿಯರೆನ್ಸ್ ನೀವು ಕೊಡಬೇಕು ಎಂದರೆ ಕುಡಿಯುವ ನೀರಿಗೆ ಯಾವುದೇ ರೀತಿಯಾದಂತಹ ಅಭ್ಯಂತರವನ್ನು ಮಾಡುವುದಿಲ್ಲ.

ಶ್ರೀ ಆರ್. ನಾರಾಯಣ್ : ಈಗ ಹೇಮಾವತಿ ನಾಲೆಯಿಂದ ನಮಗೆ ನೀರು ಬರತಕ್ಕಂಥಾದ್ದು. ವಲಯದ ವ್ಯಾಪ್ತಿಗೆ ಎಂದರೆ, ಕಮ್ಯಾಂಡ್ ಏರಿಯಾಗೆ ಬರತಕ್ಕಂಥ, ಅಚ್ಚುಕಟ್ಟು ಪ್ರದೇಶಕ್ಕೆ ಬರತಕ್ಕಂಥ ಕೆರೆಗಳಿಗೆ ದಯಮಾಡಿ ನೀರನ್ನು ತುಂಬತಕ್ಕಂಥ ಒಂದು ಆಶ್ವಾಸನೆಯನ್ನು ಕೊಟ್ಟು ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಕಾರಣ ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಮತ್ತು ಆ ಕೆರೆಗಳು ಬತ್ತಿಹೋಗಿವೆ. ಆ ಕೆರೆಗಳಿಗೆ ಬರತಕ್ಕಂಥ ಫೀಡರ್ ಚಾನಲ್ ಏನಿತ್ತು ಇವರು ಮೇನ್ ಕೆನಾಲ್ ಮಾಡುವುದರ ಮೂಲಕ ಕೆರೆಗಳು ಬರತಕ್ಕಂಥ ಫೀಡರ್ ಚಾನಲ್‌ಗೆ ಮೇನ್ ಕೆನಾಲ್ ಅಡ್ಡಿ ಬಂದಿರುವುದರಿಂದ ಆ ಕೆರೆ, ಅಚ್ಚುಕಟ್ಟುದಾರರಿಗೆ ವ್ಯವಸಾಯಕ್ಕೆ ಮತ್ತು ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ದಯಮಾಡಿ ಹೇಮಾವತಿ ನಾಲಾ ವಲಯ ತುಮಕೂರು ವ್ಯಾಪ್ತಿಗೆ ಬರತಕ್ಕಂಥ ಕಮಾಂಡ್ ಏರಿಯಾ ಕೆರೆಗಳಿಗೆ ತಕ್ಷಣ ನೀರು ಕೊಡತಕ್ಕಂಥ ಕ್ರಮವನ್ನು ಸರ್ಕಾರ ಹಮ್ಮಿಕೊಳ್ಳಬೇಕು. ಅದರ ಬಗ್ಗೆ ಮಾನ್ಯ ಸಚಿವರು ತೀವ್ರ ಗಮನವನ್ನು ಕೊಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ನಮ್ಮ ತಿಪಟೂರು ಶಾಸಕರು ಮಾನ್ಯ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಕೆರೆಗೆ ನೀರು ಕೊಡುತ್ತೇವೆ ಎಂದು ಒಂದು ಮಾತನ್ನು ಹೇಳಿದ್ದರು. ಅದನ್ನು ಸೇರಿಸಿ ಹೇಳಿಬಿಡಿ. ಪಾಪ ಅವರು ಬಂದು ಅಲ್ಲಿ ಒಪ್ಪಿಕೊಂಡಿದ್ದಾರೆ. ಕುಡಿಯುವ ನೀರು ತುಂಬಿಸಿಕೊಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಯಡಿಯೂರಪ್ಪನವರೇ, ಪ್ರಾರಂಭದಲ್ಲಿಯೇ ನಾನು ಹೇಳಿದ್ದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಉಪಾಧ್ಯಕ್ಷರೇ, ಕೆ.ಇ.ಬಿ. ಅರಿಯರ್ಸ್ ಅನ್ನು ಡೆಫರ್ ಮಾಡಿ ತಿಪಟೂರು ಮತ್ತು ಅರಸೀಕೆರೆಗೆ ಕುಡಿಯುವ ನೀರನ್ನು ತಾವು ಕ್ಲಿಯರ್ ಮಾಡಿಕೊಡಿ ಎಂದು ಹೇಳಿದ್ದಾರೆ. ಸನ್ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡು ಅವರು ಇನ್ಸ್ಟ್ರಕ್ಷನ್ ಕೊಡಟ್ಟಿದ್ದಾರೆ.

ಉಪಾಧ್ಯಕ್ಷರು : ಅವರು ಹೇಳಿದ್ದಾರೆ, ಒಪ್ಪಿಕೊಂಡಿದ್ದಾರೆ, ಮತ್ತೆ ಏನು?

ಶ್ರೀ ಕೆ.ಎನ್. ನಾಗೇಗೌಡ : ತಿಪಟೂರು ಮತ್ತು ಕೆ.ಆರ್. ಪೇಟೆ, ನಾಗಮಂಗಲ ಈ ಮೂರು ಸೇರಿಕೊಂಡಿದೆ. ನಾರಾಯಣ್‌ರವರು ಹೇಳಿದ ಪ್ರಶ್ನೆಗೆ ಈಗ ಹೊಸದಾಗಿ ನೀರನ್ನು ಅಲ್ಲಿ ಬಿಟ್ಟಿದ್ದೇವೆ. ಸುಮಾರು 125-130 ಕೆರೆಗಳು ಬರುತ್ತವೆ. ಹೊಸದಾಗಿ 25-30 ವರ್ಷದ ಹಿಂದೆ ಆಸೆ ಪಟ್ಟು ತುಮಕೂರು ಜನ ನೀರು ಹೋಗತಕ್ಕಂಥ ಸಂದರ್ಭದಲ್ಲಿ ಕೆರೆಗಳನ್ನು ತುಂಬಿಸದೇ ಹೋದರೆ ಅಂಡರ್ ಗ್ರೌಂಡ್ ವಾಟರ್ ಸಮಸ್ಯೆಯಾಗುತ್ತದೆ ಎಂದು 4-5 ಟಿಎಂಸಿ ನೀರು ಬೇಕು ಎಂದು ಕೇಳಿದ್ದಾರೆ. ಈ ವರ್ಷದ ಮಟ್ಟಿಗೆ ಕಮಾಂಡ್ ಏರಿಯಾ ಫೈನಲೈಸ್ ಮಾಡುವವರಿಗೆ, ಈ ವರ್ಷದಮಟ್ಟಿಗೆ ಎಲ್ಲಾ ಕೆರೆಗಳಿಗೆ ಸಾಧ್ಯವಾದಮಟ್ಟಿಗೆ ಎಲ್ಲಾ ಕೆರೆಗಳಿಗೆ ತುಂಬಿಸಿಕೊಡುವಂತಹ ಆದೇಶ ನಾನು ಕೊಡುತ್ತೇನೆ.

ಸೊರಬದಲ್ಲಿ ಸಣ್ಣ ನೀರಾವರಿಯ ಉಪವಿಭಾಗ ಕಛೇರಿ

401 - ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೊರಬ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಉಪ ವಿಭಾಗದ ಕಛೇರಿಯ ಈ ಮೊದಲು ಕಾರ್ಯನಿರ್ವಹಿಸುತ್ತಿದ್ದು ಸದರಿ ಕಛೇರಿಯನ್ನು ಸ್ಥಳಾಂತರಗೊಳಿಸಲಾಗಿರುವುದು ನಿಜವೇ, ಸದರಿ ಕಛೇರಿಯನ್ನು ಪುನಃ ತೆರೆಯುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಸೊರಬ ತಾಲ್ಲೂಕಿನ ಮೂಗೂರು ಏತ ನೀರಾವರಿ ಯೋಜನೆ, ಮೂಡಿ ಏತ ನೀರಾವರಿ ಯೋಜನೆ ಮತ್ತು ಗುಡವಿ ಏತನೀರಾವರಿ ಯೋಜನೆ ಹಾಗೂ ಕಟ್ಟಿಹಳ್ಳಿ ಏತ ನೀರಾವರಿ ಯೋಜನೆ ಮತ್ತು ಕೆರೆ ಕಾಮಗಾರಿಗಳು ಪ್ರಗತಿಯಲ್ಲಿದ್ದರೂ ಸದರಿ ಕಛೇರಿಯನ್ನು ಇದುವರೆವಿಗೂ ತೆರೆಯದಿರಲು ಕಾರಣವೇನು? ಈ ಕಛೇರಿಯನ್ನು ಯಾವಾಗ ತೆರೆಯಲು ಕ್ರಮ ಕೈಗೊಳ್ಳಲಾಗುವುದು?